30ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರುನಗರ.

ಸಿ.ಸಿ.ನಂ.15010/2020

ದಿನಾಂಕ 20 ನೇ ಏಪ್ರಿಲ್ 2021

ಫಿರ್ಯಾದಿದಾರರ ಹೆಸರುಃ ರಾಜ್ಯ ಸರ್ಕಾರದ ಪರವಾಗಿ ಜೆ ಪಿ ನಗರ ಪೋಲಿಸರು

-ವಿರುದ್ದ –

ಆರೋಪಿ ಹೆಸರುಃ ಮಾರಿಮುತ್ತು

ದೋಷಾರೋಪಣೆ

ಶ್ರೀ. ಐ ಪಿ ನಾಯಿಕ ಬಿ.ಎ. ಎಲ್,ಎಲ್,ಬಿ. (ಸ್ಪೆಷಲ್) 30ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿ, ಬೆಂಗಳೂರು ಆದ ನಾನು, ಮೇಲ್ಕಾಣಿಸಿದ ಆರೋಪಿಯಾದ ನಿಮ್ಮ ವಿರುದ್ಧ ಮಾಡುವ ಆಪಾದನೆ ಏನೆಂದರೆ

ಆರೋಪಿಯಾದ ನೀನು ಜೆ ಪಿ ನಗರ ಪೋಲಿಸ್ ಠಾಣಾ ವ್ಯಾಪ್ತಿಯ, 3 ನೇ ಹಂತ, 8 ನೇ ಮುಖ್ಯರಸ್ತೆಯಲ್ಲಿ ಚಾಸಾ-1 ನಾಗಭರಣ ಇವರಿಗೆ ಸೇರಿದ ನಾಮ್ ಧಾರಿ ಫ್ರೆಶ್ ಸೂಪರ್ ಮಾರ್ಕೇಟ್ ನಂಬರ್ 127/ಎ ಅಂಗಡಿಯಲ್ಲಿ 2020 ಏಪ್ರಿಲ್ ತಿಂಗಳಾದ 20 ಮತ್ತು 21 ರ ನಡುವಿನ ರಾತ್ರಿ 9-00 ಗಂಟೆಯಿಂದ ಬೆಳಗಿನ ಜಾವ 5-15 ಗಂಟೆಯಲ್ಲಿ ಕಳ್ಳತನ ಮಾಡುವ ಉದ್ದೇಶದಿಂದ ಅತಿಕ್ರಮ ಪ್ರವೇಶ ಮಾಡಿರುವುದರಿಂದ, ನನ್ನ ಸಂಜ್ಞೆಯೊಳಗೆ ಭಾ.ದಂ.ಸಂ. ಕಲಂ 457 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಮಾಡಿರುತ್ತೀ ಎಂತಲೂ

ಈ ಮೇಲೆ ಹೇಳಿದ ದಿನ, ವೇಳೆ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಚಾಸಾ-1 ಇವರ ಅನುಮತಿ ಇಲ್ಲದೇ ಅವರ ಅಂಗಡಿಯಲ್ಲಿದ್ದ ದ್ರಾಕ್ಷಿ, ಬಾದಾಮಿ ಮತ್ತು ಗೋಡಂಬಿಯನ್ನು ಕಳ್ಳತನ ಮಾಡಿರುವುದರಿಂದ ನನ್ನ ಸಂಜ್ಞೆಯೊಳಗೆ ಭಾ.ದಂ.ಸಂ. ಕಲಂ 380 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಮಾಡಿರುತ್ತೀ ಎಂದು ಆಪಾದಿಸಲಾಗಿದೆ.

(ಐ ಪಿ ನಾಯಿಕ )

30ನೇ ಅ ಮು ಮ ದಂ ನ್ಯಾ ಬೆಂ ನಗರ

<u>ಆರೋಪಣೆ</u>

ಪ್ರಶ್ನೆ1ः ಈಗ ಓದಿ ಹೇಳಿದ ದೋಷಾರೋಪಣೆ ನಿಮಗೆ ಅರ್ಥವಾಯಿತೆ**?**
ಉತ್ತರः ಆः-

ಪ್ರಶ್ನೆः2ः ಮೇಲ್ಕಂಡ ದೋಷಾರೋಪಣೆಯನ್ನು ನೀವು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಮಾಡಿಸುವಿರಾ**?**
ಉತ್ತರः ಆः-

(ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ ಗೊತ್ತಿರುವ ಭಾಷೆಯಲ್ಲಿ ಓದಿ ಹೇಳಿ ವಿವರಿಸಲಾಗಿ ಅವರು ನೀಡಿದ ಉತ್ತರವನ್ನು ಬರೆದು ಕೊಳ್ಳಲಾಗಿದೆ)

ಬೆಂಗಳೂರು
ದಿನಾಂಕः20-4-2021. **(ಐ ಪಿ ನಾಯಿಕ )**
30ನೇ ಅ ಮು ಮ ದಂ ನ್ಯಾ ಬೆಂ ನಗರ